ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	:	ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1338**
ಉತ್ತರಿಸಬೇಕಾದ ದಿನಾಂಕ	:	09.03.2022
ಉತ್ತರಿಸಬೇಕಾದ ಸಚಿವರು	:	ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ವಸತಿ ಯೋಜನೆಗಳಲ್ಲಿ ಬಡವರಿಗೆ ಮಂಜೂರು ಮಾಡುವ ಮನೆಗಳ ನಿರ್ಮಾಣಕ್ಕೆ ಹಾಲಿ ಇರುವ ಸಹಾಯಧನದ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ ;</td><td rowspan="3">
ಸರ್ಕಾರವು ಬಡ ವರ್ಗದ ಫಲಾನುಭವಿಗಳು ಮನೆ ನಿರ್ಮಾಣ ಮಾಡಿಕೊಳ್ಳುವಂತೆ ಉತ್ತೇಜಿಸಲು ಸಹಾಯಧನದ ರೂಪದಲ್ಲಿ ಅನುದಾನವನ್ನು ನೀಡುತ್ತಿದೆ. ಇದರ ಜೊತೆಗೆ ಫಲಾನುಭವಿಯು ಸಹಾಯಧನದ ನಾಲ್ಕು ಪಟ್ಟು ಮೀರದಂತೆ ವಂತಿಕೆ ಹಣ ಅಥವಾ ಬ್ಯಾಂಕ್‌ಗಳು/ಸಂಘ ಸಂಸ್ಥೆಗಳ ಮೂಲಕ ಸಾಲವನ್ನು ಪಡೆದು ಮನೆ ನಿರ್ಮಾಣ ಮಾಡಿ ಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.
ರಾಜೀವ್ ಗಾಂಧಿ ವಸತಿ ನಿಗಮದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ವಿವಿಧ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಯೋಜನೆಗಳಡಿ ನೀಡಲಾಗುತ್ತಿರುವ ಸಹಾಯಧನದ ವಿವರ ಕೆಳಕಂಡಂತಿದೆ.
<table>
<tr><th rowspan="2">ಕ್ರ. ಸಂ</th><th rowspan="2">ಯೋಜನೆ</th><th colspan="2">ಗ್ರಾಮೀಣ</th><th colspan="2">ನಗರ</th></tr>
<tr><th>ಸಾಮಾನ್ಯ/ ಅಲ್ಪ ಸಂಖ್ಯಾತ</th><th>ಪ.ಜಾತಿ/ ಪ. ಪಂಗಡ</th><th>ಸಾಮಾನ್ಯ ಅಲ್ಪ ಸಂಖ್ಯಾತ</th><th>ಪ.ಜಾತಿ/ ಪ. ಪಂಗಡ</th></tr>
<tr><td>1.</td><td>ಬಸವ ವಸತಿ ಯೋಜನೆ (ಗ್ರಾಮೀಣ)</td><td>1.20</td><td>-</td><td>-</td><td>-</td></tr>
<tr><td>2.</td><td>ವಾಜಪೇಯಿ ನಗರ ವಸತಿ ಯೋಜನೆ(ನ)</td><td>-</td><td>-</td><td>1.20</td><td>-</td></tr>
<tr><td>3.</td><td>ಡಾ: ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ(ಗ್ರಾ & ನ)</td><td>-</td><td>1.75</td><td>-</td><td>2.00</td></tr>
<tr><td>4.</td><td>ಡಿ.ದೇವರಾಜು ಅರಸು ವಸತಿ ಯೋಜನೆ(ಗ್ರಾ & ನ)</td><td>1.20</td><td>1.50</td><td>1.20</td><td>1.50</td></tr>
<tr><td>5.</td><td>ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾ)</td><td>1.20</td><td>1.50</td><td>-</td><td>-</td></tr>
</table>
</td></tr>
<tr><td>ಆ)</td><td>ಇಲ್ಲದಿದ್ದಲ್ಲಿ, ಪ್ರಸ್ತುತ ಇರುವ ಕಟ್ಟಡ ಸಾಮಗ್ರಿಗಳ ದರದಲ್ಲಿ ಫಲಾನುಭವಿಗಳು ಮನೆಗಳನ್ನು ನಿರ್ಮಾಣ ಮಾಡಿ ಕೊಳ್ಳಲು ಸಾಧ್ಯವಿದೆಯೇ ;</td></tr>
<tr><td>ಇ)</td><td>ಮಾರುಕಟ್ಟೆಯಲ್ಲಿನ ಕಟ್ಟಡ ಸಾಮಗ್ರಿಗಳ ದರವು ಹೆಚ್ಚಾಗಿರುವುದರಿಂದ ಮನೆಗಳ ನಿರ್ಮಾಣ ವೆಚ್ಚದ ಸಹಾಯಧನವನ್ನು ಹೆಚ್ಚಿಸಲು ಸರ್ಕಾರ ಪರಿಶೀಲಿಸಲು ಕ್ರಮ ವಹಿಸುವುದೇ ?</td></tr>
</table>

		6.	ಪ್ರಧಾನ ಮಂತ್ರಿ ಆವಾಸ್ ಯೋಜನೆ(ನ)	-	-	1.50	1.50
		ರಾಜ್ಯ ಸರ್ಕಾರದಿಂದ ನೀಡುವ ಸಹಾಯಧನವನ್ನು ಪರಿಷ್ಕರಿಸುವ ಬಗ್ಗೆ ಸಂದರ್ಭಾನುಸಾರ ಪರಿಶೀಲಿಸಲಾಗುವುದು.					

ಸಂಖ್ಯೆ :ವಇ 120 ಹೆಚ್‌ಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು